## ನಿಮ್ಮೊಡನೆ

# ಉಸಿರುಗಟ್ಟಿರುವ ಪ್ರಕೃತಿಗೆ ಎಲ್ಲಿದೆ ಲಸಿಕೆ?

> ಕೊರೊನಾಕ್ಕೆ ಲಸಿಕೆ ಕಂಡುಹಿಡಿಯಲು ಇಡೀ ವಿಶ್ವ ಶ್ರಮಿಸುತ್ತದೆ. ಆದರೆ, ಪ್ರಕೃತಿಯ ಅನಾರೋಗ್ಯಕ್ಕೆ ಅಗತ್ಯವಾದ ಲಸಿಕೆಯ ಬಗ್ಗೆ ನಮಗೆ ಕಾಳಜಿ ಕಡಿಮೆ. ಸದ್ಯದ ಸಮಸ್ಯೆಗೆ ಉತ್ತರ ಹುಡುಕುವುದರಲ್ಲಿ ಬಂಡವಾಳಕೇಂದ್ರಿತ ವ್ಯವಸ್ಥೆಗೆ ಆಸಕ್ತಿಯೇ ಹೊರತು, ರೋಗಮೂಲದ ನಿವಾರಣೆಯ ಬಗೆಗಲ್ಲ.

‘ಪರಿಸರ ಮಾಲಿನ್ಯವು ಮಾನವೀಯತೆಗೆ ಮಾತ್ರವಲ್ಲ, ಭೂಮಿಯ ಮೇಲಿನ ಸಕಲ ಜೀವಸಂಕುಲಕ್ಕೆ ಬಗೆಯುವ ದ್ರೋಹ’ ಎನ್ನುವುದು ಟರ್ಕಿಯ ಬರಹಗಾರ ಮೆಹ್ಮೆತ್ ಮುರಾತ್ ಇಲ್ದಾನ್ ಅವರ ಮಾತು. ಈ ನೈತಿಕ ಸಂಕಟ ಜಗತ್ತಿಗೆ ಮುಖ್ಯವೆನ್ನಿಸುತ್ತಿಲ್ಲ ಎನ್ನುವುದಕ್ಕೆ ದಿನದಿಂದ ದಿನಕ್ಕೆ ಭೂಮಂಡಲ ಹೆಚ್ಚು ಹೆಚ್ಚು ಕಲುಷಿತಗೊಳ್ಳುತ್ತಿರುವುದು ಉದಾಹರಣೆಯಾಗಿದೆ. ಸ್ವಿಟ್ಜರ್ಲೆಂಡ್ ಮೂಲದ ‘ಐಕ್ಯೂಏರ್’ ಎನ್ನುವ ಸಂಸ್ಥೆ ಬಿಡುಗಡೆ ಮಾಡಿರುವ ‘ವಿಶ್ವದ ವಾಯು ಗುಣಮಟ್ಟ ವರದಿ’ ಕೂಡ ಪರಿಸರದಲ್ಲಿನ ಮನುಷ್ಯನ ಹಸ್ತಕ್ಷೇಪದತ್ತ ಬೆಟ್ಟು ಮಾಡುತ್ತಿದೆ. ವಿಶ್ವದಲ್ಲಿ ಅತಿ ಹೆಚ್ಚು ವಾಯುಮಾಲಿನ್ಯ ಇರುವ ಮೂವತ್ತು ನಗರಗಳಲ್ಲಿ 22 ಭಾರತದಲ್ಲಿಯೇ ಇವೆ ಎನ್ನುತ್ತಿದೆ ವರದಿ. ಈ ಕೊಳಕು ನಗರಗಳ ದೊಡ್ಡಣ್ಣನಂತೆ ರಾಜಧಾನಿ ದೆಹಲಿಯಿದೆ; ಅಂತರರಾಷ್ಟ್ರೀಯ ಮಟ್ಟದಲ್ಲಿ ಮಸಿ ಬಳಿಸಿಕೊಂಡಿದೆ.

106 ದೇಶಗಳಲ್ಲಿ ನಡೆಸಿದ ಅಧ್ಯಯನ ನಡೆಸಿರುವ ‘ಐಕ್ಯೂಏರ್’ ಭಾರತದ ನಗರಗಳ ಬಗ್ಗೆ ನೀಡಿರುವ ಅಂಕಿಅಂಶಗಳು ನಮ್ಮ ಉಸಿರಾಟವನ್ನು ಏರುಪೇರು ಮಾಡುವಷ್ಟು ಗಂಭೀರವಾಗಿವೆ. ಉಸಿರುಗಟ್ಟಿರುವ ದೇಶದ ನಗರಗಳಲ್ಲಿ ಬಹುಪಾಲು ಉತ್ತರಪ್ರದೇಶ ಮತ್ತು ಹರಿಯಾಣಗಳಲ್ಲಿವೆ. ಈ ನಗರಗಳ ಶ್ವಾಸಕೋಶಗಳ ಸಿಕ್ಕು ತಿಳಿಯಾಗಿಸುವ ಪ್ರಯತ್ನಗಳು ಮಾತ್ರ ಚುರುಕಾಗಿ ನಡೆಯುತ್ತಿಲ್ಲ. 2019ಕ್ಕೆ ಹೋಲಿಸಿದರೆ 2020ರಲ್ಲಿ ದೆಹಲಿಯ ವಾಯುಮಂಡಲ ಶೇ. 15ರಷ್ಟು ಉತ್ತಮಗೊಂಡಿದೆ. ಈ ಬದಲಾವಣೆ ಮನುಷ್ಯಪ್ರಯತ್ನದಿಂದ ಆದುದಲ್ಲ; ಕೊರೊನಾ ಕಾರಣದಿಂದಾಗಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್‌ನಿಂದಾಗಿ ವ್ಯತ್ಯಾಸ ಕಂಡುಬಂದಿದೆ. ಕೊರೊನಾ ಸೋಂಕಿನ ತೀವ್ರತೆಯ ಸಂದರ್ಭ ನಮಗೆಲ್ಲ ಪರಿಸರ ಕಾಳಜಿಯ ಪಾಠವಾಗಿ ಪರಿಣಮಿಸಬೇಕಿತ್ತು. ಇತಿಹಾಸದಿಂದ ನಾವು ಪಾಠ ಕಲಿಯುವುದಿಲ್ಲ ಎನ್ನುವುದಕ್ಕೆ ಕೊರೊನಾ ಹೊಸ ಉದಾಹರಣೆ ಆಯಿತಷ್ಟೆ. ಸೋಂಕಿಗೆ ಒಗ್ಗಿಕೊಂಡ ನಂತರ ಮತ್ತದೇ ಮೇಲಾಟ, ಹಸ್ತಕ್ಷೇಪ. ಪೆಟ್ರೋಲ್, ಡೀಸೆಲ್ ಬೆಲೆಯೊಂದಿಗೆ ಸ್ಪರ್ಧಿಸುವಂತೆ ದ್ವಿಚಕ್ರ ವಾಹನ ಹಾಗೂ ಕಾರುಗಳ ಮಾರಾಟ ಜೋರಾಗಿ ನಡೆದಿದೆ. ಒಂದೇ ಸಮನೆ ಹೆಚ್ಚುತ್ತಿರುವ ವಾಹನಗಳ ಬಳಕೆಯೊಂದಿಗೆ ಅಡುಗೆಗೆ ಉರುವಲು ಬಳಕೆಯೂ ಹೆಚ್ಚಾಗಿದೆ. ಇನ್ನೊಂದೆಡೆ, ಕೃಷಿ ತ್ಯಾಜ್ಯಗಳ ಸುಡುವಿಕೆ, ಕಟ್ಟಡ ನಿರ್ಮಾಣ ತ್ಯಾಜ್ಯಗಳು, ಕೈಗಾರಿಕಾ ತ್ಯಾಜ್ಯಗಳು ವಾಯುಮಂಡಲದಲ್ಲಿ ವಿಷಾನಿಲ ತುಂಬುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿನ ಈ ಯಾಂತ್ರಿಕ ಕಾರಣಗಳ ಜೊತೆಗೆ, ನಮ್ಮೊಳಗಿನ ಹಸಿರುಪ್ರೀತಿ ಮುಕ್ಕಾಗಿರುವುದನ್ನೂ ಸಮಸ್ಯೆಗೆ ಪ್ರಮುಖ ಕಾರಣವಾಗಿ ಗುರ್ತಿಸಬೇಕು. ಕಾಡು ಸವಕಳಿ ಎಗ್ಗಿಲ್ಲದೆ ನಡೆದಿದೆ. ಮನೆಯ ಮುಂದಿನ ಅಂಗಳಕ್ಕೆ ಸಿಮೆಂಟ್ ಸಾರಣೆ ಇರಬೇಕೆಂದು ಬಯಸುತ್ತಿದ್ದೇವೆಯೇ ಹೊರತು ಮರದ ನೆರಳು ಇರಬೇಕೆಂದು ಯೋಚಿಸುತ್ತಿಲ್ಲ. ನಮ್ಮ ಮನಸ್ಸು ಇಷ್ಟೊಂದು ಜಡ್ಡುಗಟ್ಟಿರುವಾಗ ವಾಯುಮಂಡಲ ತಿಳಿಯಾಗಿರಬೇಕೆಂದು ನಿರೀಕ್ಷಿಸುವುದು ಹೇಗೆ ಸಾಧ್ಯ? ಪ್ರಕೃತಿ ನಮ್ಮ ಮನಸ್ಸಿನ ಪ್ರತಿಬಿಂಬವೂ ಹೌದು ಗತಿಬಿಂಬವೂ ಹೌದು.

ವಾಯು ಮಾಲಿನ್ಯ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಸಮಸ್ಯೆಗಳನ್ನು ಸೃಷ್ಟಿಸಲಿದೆ. ಜನರ ಆರೋಗ್ಯದ ಜೊತೆಗೆ, ದೇಶದ ಆರ್ಥಿಕತೆಯ ಮೇಲೂ ದುಷ್ಪರಿಣಾಮ ಬೀರಲಿದೆ. ಆದರೆ, ಸಮಕಾಲೀನ ರಾಜಕಾರಣ ಧರ್ಮದ ಬಗ್ಗೆ ತಲೆಕೆಡಿಸಿಕೊಂಡಷ್ಟು ಜನಸಾಮಾನ್ಯರ ಆರೋಗ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿರುವುದಕ್ಕೆ ನಿದರ್ಶನಗಳಿಲ್ಲ. ಕೊರೊನಾಕ್ಕೆ ಲಸಿಕೆ ಕಂಡುಹಿಡಿಯಲು ಇಡೀ ವಿಶ್ವ ಹಗಲಿರುಳು ಶ್ರಮಿಸುತ್ತದೆ. ಆದರೆ, ಪ್ರಕೃತಿಯ ಅನಾರೋಗ್ಯಕ್ಕೆ ಅಗತ್ಯವಾದ ಲಸಿಕೆಯ ಬಗ್ಗೆ ನಮಗೆ ಕಾಳಜಿ ಕಡಿಮೆ. ಸದ್ಯದ ಸಮಸ್ಯೆಗೆ ಉತ್ತರ ಹುಡುಕುವುದರಲ್ಲಿ ಬಂಡವಾಳಕೇಂದ್ರಿತ ವ್ಯವಸ್ಥೆಗೆ ಆಸಕ್ತಿಯೇ ಹೊರತು, ರೋಗಮೂಲದ ನಿವಾರಣೆಯ ಬಗೆಗಲ್ಲ.

ಭ್ರಷ್ಟಾಚಾರದ ಬಗೆಗಿನ ನಮ್ಮ ಮಾತು ಮತ್ತು ಚರ್ಚೆಗಳು ರಾಜಕೀಯ ಹಾಗೂ ಆರ್ಥಿಕ ಅನೈತಿಕತೆಯ ಬಗ್ಗೆ ಸೀಮಿತಗೊಳ್ಳುವುದೇ ಹೆಚ್ಚು. ಪರಿಸರವನ್ನು ಕೊಳಕು ಮಾಡುವುದನ್ನು ಕೂಡ ಭ್ರಷ್ಟಾಚಾರದ ರೂಪದಲ್ಲಿ, ಪಾಪದ ರೂಪದಲ್ಲಿ ಪರಿಗಣಿಸಬೇಕು. ಈ ಪ್ರಾಕೃತಿಕ ಭ್ರಷ್ಟಾಚಾರದಲ್ಲಿ ಜನಸಾಮಾನ್ಯರ ಪಾತ್ರವೂ ದೊಡ್ಡದಾಗಿದೆ; ಹಾಗಾಗಿ ನಮ್ಮ ಜವಾಬ್ದಾರಿಯೂ ದೊಡ್ಡದಾಗಿದೆ. ದೂರದ ದೆಹಲಿಯ ಉಸಿರುಪೆಟ್ಟಿಗೆಯಲ್ಲಿ ಅಪಶ್ರುತಿ ಕೇಳಿಸುತ್ತಿದೆ ಎಂದು ದಕ್ಷಿಣದವರು ನಿರಾಳವಾಗಿರುವಂತಿಲ್ಲ. ಬೆಂಗಳೂರು ಸೇರಿದಂತೆ ರಾಯಚೂರು, ಬೆಳಗಾವಿ, ತುಮಕೂರು, ಕೋಲಾರ, ವಿಜಯಪುರ, ಹುಬ್ಬಳ್ಳಿ, ಧಾರವಾಡ ಮತ್ತು ಬಾಗಲಕೋಟೆ ಕಲುಷಿತ ನಗರಗಳು ಎಂದು ‘ಗ್ರೀನ್‌ಪೀಸ್ ಇಂಡಿಯಾ’ ವರದಿ ಹೇಳುತ್ತದೆ. ಇಂಥ ವಿವರಗಳನ್ನು ಕೇಳಿ ನಿಟ್ಟುಸಿರುಬಿಟ್ಟರಷ್ಟೆ ಸಾಲದು; ಕನಿಷ್ಠ ನಮ್ಮ ಮನೆಯ ಅಂಗಳದಲ್ಲಾದರೂ ಗಿಡ–ಮರ ಬೆಳೆಸುವಷ್ಟಾದರೂ ನೈತಿಕತೆ ನಮ್ಮದಾಗಬೇಕು. ನಂತರದಲ್ಲಿ ಅಂಗಳದಲ್ಲಿನ ಹಸಿರು ಕನಸುಗಳು ಬಯಲಿನಲ್ಲಿ ಬಿತ್ತನೆಯಾಗಬೇಕು.

■ ರಘುನಾಥ ಚ.ಹ.



ಈಶ್ವರ್